



ನಿರ್ಮಲಾ ಶೆಟ್ಟರ್
ಕಲೆ: ರೂಪಶ್ರೀ ಕಲ್ಲಿಗನೂರು



# ಉಫ್..

ನೆಟ್ಟ ನೋಟದಲೊಮ್ಮೆ
ಕಣ್ ಬಿಟ್ಟು
ಆದಿ ಅನಾದಿಯ ಮೂಲಕೆ
ತುಟಿಯಿಂದ ಉಫ್..
ಎಂಬುಸಿರು ಹಾರಿಸಿದಾಗ

ಮುಗುಳ್ನಗು, ತಿರುಗಿ ನಿಲ್ಲು,
ಬೆನ್ನ ಹರವಿನ ಬಯಲು ಆಟಕೆ
ಹೇಳಿ ಮಾಡಿಸಿದಂತಿದೆ
ಮುಲುಕಾಟದ ದನಿಯೆ ಚಂದ
ಎಂದೆನ್ನುವ ಆಜ್ಞೆ, ಅಂಕುಶ ಹೇಳಿಕೆ
ಕಂಪನಗೊಂಡು ಸವಕಲಾಗುತ್ತವೆ

ಅಧಿಸೂಚನೆ
ಹೊರಡಿಸುವ ದನಿ ಮಂದವಾಗಿ
ಮುಂದಡಿ ಇಡುವ ಸ್ಪರ್ಶಕೀಗ
ನೂರಾಒಂದರ ಹರೆಯ ಬಂದು
ಉಸಿರು ತೇಲುಮೇಲು

ನಡಿಗೆ ಅಂಬೆಗಾಲಿಕ್ಕಿ ಸುಖಾಸುಮ್ಮನೆ
ಆಹ್ವಾನ ನೀಡುತ ಕುಳಿತುಬಿಡುವ ಭಂಗಿ
ಕಚಗುಳಿಯ ನಗು ತರಿಸುತ್ತದವಳ
ಬೆಸುಗೆಗೊಗ್ಗದ ಕಾಲು, ಸೊಂಟ,
ತೊಡೆಗಳಿಗೆ

ಚಾಲನೆಗೆ ಬರಲಾರವು
ಯಾವ ಆದೇಶಗಳು ಮತ್ತೀಗ
ಅವಳು, ಅವಳು ಮಾತ್ರ

ಭೂಮಿಯಲಿ ಹಕ್ಕಿಯುಗುಳಿದ ಬೀಜ ಮಾತ್ರ
ಮೊಳಕೆಯೊಡೆಯುವ ಕಾಲ ಸನ್ನಿಹಿತವಾಗಿದೆ